**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** DW-2

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 10.10.2025

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ಈ ದಾವೆಯಲ್ಲಿ ನನಗೆ ನಮ್ಮ ಕಂಪನಿಯಿಂದ ಸಾಕ್ಷಿ ನುಡಿಯಲು authorization letter ಅನ್ನು ನೀಡಿರುತ್ತಾರೆ. ಸದರಿ authorization letter ಅನ್ನು ನಮ್ಮ ಕಂಪನಿಯ ನಿರ್ದೇಶಕರು ನೀಡಿರುತ್ತಾರೆ. Board of resolution ಅನ್ನು ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ.

ನೀವು ನಿಡಿ.11 ದಾಖಲೆಯನ್ನು ಹೊರತುಪಡಿಸಿ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ Board of resolution ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪನಿಯಲ್ಲಿ ನಾನು sales head ಆಗಿ ಕೆಲಸ ಮಾಡುತ್ತಿದ್ದೇನೆ. 2012 ರಿಂದ ನಾನು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಕಂಪನಿಯಲ್ಲಿ ಕೆಲಸ ಮಾಡುವ ಸಲುವಾಗಿ ನನಗೆ ಗುರುತಿನ ಚೀಟಿಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ.

2012 ರಿಂದ ನಮ್ಮ ಕಂಪನಿಯಲಿ ನಾನು ಕೆಲಸ ಮಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ . ಈ ದಾವೆಯಲ್ಲಿ ಇರುವ ಪಕ್ಷಕಾರರ ಬಗ್ಗೆ ನನಗೆ ಮಾಹಿತಿ ಇರುತ್ತದೆ.

ಎಂ.ಎಲ್ ನವೀನ್ ಕುಮಾರ್ ರವರು 8 ನೇ ಪ್ರತಿವಾದಿ ಕಂಪನಿಯಲ್ಲಿ ಒಬ್ಬ ನಿರ್ದೇಶಕರು ಆಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಸದರಿ ಎಂ.ಎಲ್ ನವೀನ್ ಕುಮಾರ ರವರಿಗೂ 8 ನೇ ಪ್ರತಿವಾದಿಯ ಕಂಪನಿಗೂ ಒಡನಾಟ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮುಂಚೆ ಇತ್ತು ಆದರೆ ಈಗ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಎಂ.ಎಲ್ ನವೀನ್ ಕುಮಾರ್ ರವರು ನಮ್ಮ ಕಂಪನಿಯ consultant ಆಗಿದ್ದರು ಎಂದು ನುಡಿಯುತ್ತಾರೆ. ಎಂ.ಎಲ್ ನವೀನ್ ಕುಮಾರ್ ರವರು ನಿಮ್ಮ ಕಂಪನಿಯಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದರು ಎನ್ನುವ

ಪ್ರಶ್ನೆಗೆ ಸಾಕ್ಷಿಯು ನಮ್ಮ ಕಂಪನಿಯೂ ನವೀನ್ ಕುಮಾರ್ ರವರ ಮುಖಾಂತರ property ಗಳನ್ನು acquire ಮಾಡಿಕೊಳ್ಳುತ್ತಿತ್ತು ಎಂದು ನುಡಿಯುತ್ತಾರೆ.

1 ನೇ ದಾವಾ ಸ್ವತ್ತನ್ನು ನಿಮ್ಮ ಕಂಪನಿಯವರು ಎಂ.ಎಲ್ ನವೀನ್ ಕುಮಾರ್ ರವರ ಮುಖಾಂತರ acquire ಮಾಡಿಕೊಂಡಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೊದಲಿಗೆ ನವೀನ್ ಕುಮಾರ್ ರವರು acquire ಮಾಡಿಕೊಂಡಿದ್ದು ನಂತರ ಅದನ್ನು KIADB ರವರು acquire ಮಾಡಿಕೊಂಡಿದ್ದು ನಂತರ ನಮ್ಮ ಕಂಪನಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ನವೀನ್ ಕುಮಾರ್ ರವರಿಗೆ ಹೇಗೆ ಬಂದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಾಪೇಗೌಡ ಮತ್ತು ಅವರ ಕುಟುಂಬದವರಿಂದ ನವೀನ್ ಕುಮಾರ್ ರವರು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನವೀನ್ ಕುಮಾರ್ ರವರು ದಾವಾ ಸ್ವತ್ತನ್ನು ಖರೀದಿಸುವ ಕಾಲಕ್ಕೆ ನಾನು 8 ನೇ ಪ್ರತಿವಾದಿ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ.

ನಿಮ್ಮ ಪ್ರತಿವಾದ ಪತ್ರವನ್ನು ದಾಖಲು ಮಾಡುವ ಸಮಯದಲ್ಲಿ ನೀವು ನವೀನ್ ಕಮಾರ್ ರವರು 1 ನೇ ದಾವಾ ಸ್ವತ್ತನ್ನು ಖರೀದಿಸಿರುವ ಬಗ್ಗೆ ದಾಖಲೆಗಳನ್ನು ಖುದ್ದಾಗಿ ನೋಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದ ಪತ್ರವನ್ನು ದಾಖಲು ಮಾಡುವ ಮುಂಚೆ ನೀವು 1 ನೇ ದಾವಾ ಸ್ವತ್ತು ನವೀನ್ ಕುಮಾರ್ ರವರಿಗೆ ಹೇಗೆ ಬಂತು ಎನ್ನುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನುಅಂದರೆ ಕ್ರಯ ಪತ್ರ ಹಾಗೂ ಜಿ.ಪಿ.ಎ ಪತ್ರಗಳನ್ನು ನೀವು ಪರಿಶೀಲಿಸಿ ನಿಮ್ಮ ವಕೀಲರಿಗೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಅಸಲು ಕ್ರಯ ಪತ್ರ ಹಾಗೂ ಜಿ.ಪಿ.ಎ. ಪತ್ರ ನಿಮ್ಮ ಕಂಪನಿಯ ಸುಪರ್ದಿನಲ್ಲಿ ಇರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು assure ಇಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿ ನೀಡಲಾಯಿತು)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.